

# ಮುತ್ತಿನೊಡವೆಯ ಕರಾಮತ್ತು

ಎಥ್ನಿಕ್, ಸೆಮಿ ಎಥ್ನಿಕ್, ವೆಸ್ಟರ್ನ್ ಸೇರಿದಂತೆ ಎಲ್ಲ ಬಗೆಯ ಉಡುಗೆಗಳಿಗೆ ಮುತ್ತಿನ ಒಡವೆಯ ಕರಾಮತ್ತನ್ನು ಕಾಣಬಹುದು. ನಿಶ್ಚಿತಾರ್ಥ, ಮದುವೆ, ರಿಸೆಪ್ಷನ್‌ಗಳಂಥ ಸಮಾರಂಭಗಳಿಗೆ ಮಾತ್ರವಲ್ಲದೆ ಹಬ್ಬಹರಿದಿನ, ಪೂಜಾ ಕೈಂಕರ್ಯಗಳಿಗೆ ಮುತ್ತಿನ ಹಾರ ಚೆನ್ನಾಗಿ ಒಪ್ಪುತ್ತದೆ.

**ಯು. ವೇಣೂರು**



ಮುತ್ತಿನ ಒಡವೆ 'ಎವರ್‌ಗ್ರೀನ್ ಫ್ಯಾಷನ್' ಆಗಿದೆ. ಬಣ್ಣ, ಗಾತ್ರಗಳಲ್ಲಿ, ಆಕರ್ಷಕ ವಿನ್ಯಾಸಗಳಲ್ಲಿ ದೊರೆಯುವ ಈ ಆಭರಣ ಎಲ್ಲ ರೀತಿಯ ಉಡುಪುಗಳಿಗೂ ಒಪ್ಪುತ್ತದೆ ಅಲ್ಲದೆ ಸಖತ್ ಲುಕ್ ಅನ್ನೂ ಕೊಡುತ್ತದೆ. ಮುತ್ತಿನ ಒಡವೆ ಎಂದರೆ ಎಲ್ಲ ಮಹಿಳೆಯರಿಗೂ ಅಚ್ಚುಮೆಚ್ಚು. ಯಾವ ರೀತಿಯ ಉಡುಪನ್ನೇ ಧರಿಸಿರಲಿ, ಮುತ್ತಿನೊಡವೆ ಚೆನ್ನಾಗಿ ಮ್ಯಾಚ್ ಆಗುತ್ತದೆ. ನೈಜವಾದ ಮುತ್ತು ಅತ್ಯಂತ ಬೆಲೆಬಾಳುತ್ತದೆ. ಈಗ ಕೃತಕ ಮುತ್ತಿನ ಸರ, ಓಲೆ, ಬ್ರೇಸ್‌ಲೆಟ್, ಹಾರ ಎಲ್ಲವೂ ಲಭ್ಯವಿದ್ದು, ಹೆಣ್ಣಿನ ಅಂದವನ್ನು ಇಮ್ಮಡಿಸುತ್ತದೆ. ಹೀಗಾಗಿ ಮುತ್ತಿನ ಒಡವೆಗಳಿಗೆ ಎಲ್ಲಿಲ್ಲದ ಬೇಡಿಕೆ.

ಹೈದರಾಬಾದ್ ಮುತ್ತಿನ ನಗರಿ ಎಂದೇ ಪ್ರಸಿದ್ಧಿ. ಅಚ್ಚ ಬಿಳಿ, ಕ್ರೀಮ್ ಬಣ್ಣಗಳ ಮುತ್ತಿನ ಸೆಟ್ ಅಲ್ಲದೆ ಕಲರ್ ಕಲರ್ ಮುತ್ತಿನ ಆಭರಣಗಳೂ ಇಲ್ಲಿ ಲಭ್ಯ. ಹೀಗಾಗಿ ಹೈದರಾಬಾದ್‌ಗೆ ಹೋದ ಮಹಿಳೆಯರು ಮುತ್ತಿನ ಒಡವೆ ಖರೀದಿಸದೇ ಹಿಂತಿರುಗುವುದು ಬಹಳ ಅಪರೂಪ. ಒಂದೆಳೆ, ಎರಡೆಳೆ, ಮೂರೆಳೆ, ಹಲವು ಎಳೆಯ ಪುಟಾಣಿ ಸೈಜಿನ ಮುತ್ತನ್ನು ಒಳಗೊಂಡ ಸರ ಸಖತ್ ಲುಕ್ ಕೊಡುತ್ತದೆ. 'ಸಿಂಗಲ್ ಪೀಸ್ ಆರ್ನಮೆಂಟ್'ನಂತೆಯೂ ಮುತ್ತಿನ ಸರವನ್ನು ಧರಿಸಿ ಮಿಂಚಬಹುದು.

ಕಿವಿಯೋಲೆ, ಚೋಕರ್, ಬ್ರೇಸ್‌ಲೆಟ್ ಒಳಗೊಂಡ ಮುತ್ತಿನ ಸೆಟ್ ರೇಷ್ಮೆ ಸೀರೆ ತೊಟ್ಟಾಗ ಗ್ರ್ಯಾಂಡ್ ಆಗಿ ಕಾಣುತ್ತದೆ. ಹೀಗಾಗಿ ಹೆಂಗಳೆಯರ